ದಿನಾಂಕ: 07.11.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಬಿ ಜಿ ಆರ್ ವಕೀಲರಿಂದಃ**

ನಾನು ಸಮನ್ಸ್ ಜಾರಿಯಾದ ನಂತರ ಲಿಖಿತ ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಪ್ರತಿವಾದಿ 1 ಮತ್ತು 2 ರವರು ಮಾತ್ರ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ನಿಜ ಅವರ ಪ್ರತಿವಾದ ಪತ್ರವನ್ನು ಒಪ್ಪಿ ನಾವು ಅದನ್ನೇ ಮುಂದುವರೆಸುತ್ತೇವೆ ಎಂದು ಮೆಮೋ ಹಾಕಿದ್ದೇವೆ ಎಂದರೆ ಸಾಕ್ಷಿ ಹಾಕಿದ್ದೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ನಿಡಿ-1 ರಿಂದ 93 ದಾಖಲೆಗಳನ್ನು ಸಲ್ಲಿಸಿದ್ದೇವೆ ಎಂದರೆ ಸರಿ. 2014 ರಲ್ಲಿ ನ್ಯಾಯಾಲಯಕ್ಕೆ ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿ 1 ಮತ್ತು 2 ಮತ್ತು ಅವರ ಸಹೋದರರ ಸುಪರ್ತಿಯಲ್ಲಿ ಸದರಿ ದಾಖಲೆಗಳು ಇದ್ದವು. ನನ್ನ ದೊಡ್ಡಪ್ಪ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. ಈ ದಾವೆ ಸಲ್ಲಿಸುವಾಗ ನನ್ನ ದೊಡ್ಡಪ್ಪ ಇರಲಿಲ್ಲ. ದಾಖಲೆಗಳನ್ನು ಕೇಸ್ ಹಾಕಿದ ನಂತರ ಪ್ರತಿವಾದ ಪತ್ರ ಸಲ್ಲಿಸುವಾಗ ವಕೀಲರಿಗೆ ಕೊಟ್ಟಿದ್ದೇನೆ. ಎಲ್ಲಾ ದಾಖಲೆಗಳನ್ನು ನನಗೆ ವಕೀಲರು ಓದಿ ತಿಳಿಸಿರುತ್ತಾರೆ. ಅದರ ನಂತರ ನಾನು ಹೇಳಿದ ಹೇಳಿಕೆಯಂತೆ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಓದಲು ಬರುತ್ತದೆ.

ನಿಡಿ-1 ರಲ್ಲಿ " ಸನ್ 1917 ನೇ ಇಸವಿ ಆಗಸ್ಟ್ ತಾರೀಖು 14 ರಂದು ಹಿರಿಯೂರು ತಾಲ್ಲೂಕು, ಕಸಬಾ ಹೋಬಳಿ, ಕೂಡಲಹಳ್ಳಿ ಗ್ರಾಮದಲ್ಲಿರುವ ಗೋಕುಲದ ಜಾತಿ ಜಿರಾಯ್ತು ಕಸುಬಿನ ಪಾತೇಗೌಡನ ಮಗ ವಂದನೇ ಚಿಕ್ಕೇಗೌಡ, 2 ನೇ ಸಣ್ಣೇಗೌಡ ಈ ಎರಡು ಜನಗಳ ಮಕ್ಕಳು ವಂದನೇ ಚಿಕ್ಕೇಗೌಡ ನ ಮಕ್ಕಳು ವಂದನೇ ಸಣ್ಣೇಗೌಡ ಪೌತಿ ಇವನ ಮಗ ಪಾತ ಮೈನರ್ ಗಾರ್ಡಿಯನ್ ತಾಯಿ ಅಟ್ಟವ್ವ 1-2 ನೇ ಪಾತೇಗೌಡ, 3 ನೇ ಕರಿಯಣ್ಣ(ವ್ವ) ಜುಮ್ಲಾ ಮೂರು ಜನಗಳು ಮತ್ತು 2 ನೇ ಸಣ್ಣೇಗೌಡ, ಸಣ್ಣೇಗೌಡನ ದತ್ತು ಮಗ ಚಿಕ್ಕೇಗೌಡ ಈ ನಾಲ್ಕು ಜನಗಳು ಮಾಡಿಕೊಂಡ ಪಾರೀಖತ್ತು ಯಾನೇ ಕರಾರು. ನಮ್ಮಗಳ ತಂದೆ ಚಿಕ್ಕೇಗೌಡ ನ ಹೆಸರಿಗೆ ಖಾತೆ

ಇದ್ದು ನಮ್ಮೆಲ್ಲರ ಅನುಭವದಲ್ಲಿರುವ ಸ್ಥಿರ ಸ್ವತ್ತುಗಳ ವಿವರ ರೀ ಸರ್ವೆ ನಂಬರ್ 1 ನೇ ಬಾಗಾಯ್ತ್ ಜಮೀನಿನಲ್ಲಿ 1 ನೇ ಪೋಡು ಮತ್ತು 2 ನೇ ಪೋಡು ಸೇರಿ ಚಿಕ್ಕೇಗೌಡನ ಮೂರು ಜನ ಮಕ್ಕಳಿಗೆ ಬಂದಿರುತ್ತೆ. ರೀಸರ್ವೆ ನಂಬರ್ 1 ನೇ ಪೈಕಿ 3 ನೇ ಪೋಡು ಮಾತ್ರ ಸಣ್ಣೇಗೌಡನ ದತ್ತು ಮಗ ಚಿಕ್ಕೇಗೌಡನ ಭಾಗಕ್ಕೆ ಬಂದಿರುತ್ತೆ ಮತ್ತು ರೀ ಸರ್ವೆ ನಂಬರ್ 3 ನೇ ಖುಷ್ಕಿ ಪೈಕಿ ಪೂರ್ವ ದಿಕ್ಕಿಗಿರುವ 2 ಹಸಿಕೆಗಳು ಮತ್ತು ಪಶ್ಚಿಮ ದಿಕ್ಕಿಗಿರುವ ಕಟ್ಟೆ ಹಿಂಭಾಗದ ಜುಮ್ಲಾ 3 ಹಸಿಕೆಗಳು ಚಿಕ್ಕೆಗೌಡನ ಮಕ್ಕಳು 3 ಜನಕ್ಕೆ ಬಂದಿರುತ್ತೆ . ಬಾಕಿ ಮಧ್ಯೆಯಿರುವ ಕಟ್ಟೆ ಅಂಗಳ ಬಾಬತ್ತು 1 ಹಸಿಕೆ ಸಣ್ಣೇಗೌಡನ ಮಗ ಚಿಕ್ಕೇಗೌಡನ ಭಾಗಕ್ಕೆ ಬಂದಿರುತ್ತೆ. ರೀ ಸರ್ವೆ 51 ನೇ ಖುಷ್ಕಿ ಪೈಕಿ 2-3-4 ಈ ಮೂರು ಪೋಡುಗಳು ಮತ್ತು 1 ನೇ ಪೋಡಿನ ಪೈಕಿ ಅರ್ಧಭಾಗದ ಸಣ್ಣೇಗೌಡನ ದತ್ತು ಮಗ ಚಿಕ್ಕೆಗೌಡನ ಭಾಗಕ್ಕೆ ಬಂದಿರುತ್ತೆ. ಸದರಿ ರಿ ಸರ್ವೆ ನಂಬರ್ ಪೈಕಿ ಪಶ್ಚಿಮ ದಿಕ್ಕಿನ ಅರ್ಧ ಭಾಗ ಚಿಕ್ಕೇಗೌಡನ ಮೊಮ್ಮಗ ಮೈನರ್ ಪಾತನ ಭಾಗಕ್ಕೆ ಬಂದಿರುತ್ತೆ ಮತ್ತು ರೀ ಸರ್ವೆ ನಂಬರ್ 50 ನೇ ಖುಷ್ಕಿ ಪೂರಾ ಜಮೀನು ಚಿಕ್ಕೇಗೌಡನ ಮಕ್ಕಳು ಮೂರು ಜನಗಳ ಭಾಗಕ್ಕೆ ಬಂದಿರುತ್ತೆ. ಹಾಲಿ ಇರುವ ನಮ್ಮಗಳ ಪೈಕಿ ಅವರವರ ಅನುಭವ ಇರುವ ಮೇರೆಗೆ ವಿಭಾಗವಾಗಿರುತ್ತೆ. ಚರ ಸ್ವತ್ತುಗಳು ಯಾವತ್ತು ಈ ಕೆಳಗೆ ಸಾಕ್ಷಿ ಹಾಕಿರುವ ಪಂಚಾಯಿತರ ಸಮಕ್ಷಮ ಸಮವಾಗಿ ಪಾಲುವಿಭಾಗ ಮಾಡಿಕೊಂಡು ತೆಗೆದು ಕೊಂಡಿರುತ್ತೇವೆ. ಈ ಲಾಗಯ್ತಿನಿಂದ ಉಭಯರಿಗೂ ದೇಹ ಸಂಬಂಧವೇ ಹೊರತು ಅರ್ಥ ಸಂಬಂಧವೇನು ಇರುವುದಿಲ್ಲ. ಈ ಮೇಲ್ಕಂಡಂತೆ ನಮ್ಮ ನಮ್ಮ ಭಾಗವನ್ನು ಅನುಭವಿಸಿಕೊಂಡು ಹೋಗುತ್ತೇವೆ ಎಂಬುದಾಗಿ ಈ ದಿವಸ ನಾವೆಲ್ಲರೂ ಒಪ್ಪಿ ಈ ಕೆಳಗೆ ರುಜು ಮಾಡಿರುತ್ತೇವೆ. ಅಲ್ಲದೇ ನಮೂದು ಕಂಡಂತೆ ಚಿಕ್ಕೇಗೌಡನ ಮಕ್ಕಳಿಗೂ ಸಣ್ಣೇಗೌಡನ ದತ್ತು ಮಗ ಚಿಕ್ಕೇಗೌಡನ ಹೆಸರಿಗೆ ವರ್ಗ ಮಾಡಿರುತ್ತೇವೆ. ರಿಸರ್ವೆ ನಂಬರ್ 1 ನೇ ಜಮೀನಿನಲ್ಲಿರುವ ಜಲ ಆಸರೆ ಕಪ್ಲೆ ಮಾತ್ರ ನಾಲ್ಕು ಭಾಗದಂತೆ ಅನುಭವಿಸಿಕೊಳ್ಳುತೇವೆ ಎಂಬುದಾಗಿ ನಮ್ಮಗಳ ರಾಜಿಯಿಂದ ಮಾಡಿಕುಂಡ ಪಾರಿ ಕತ್ತು ಯಾನೆ ಕರಾರು " ಈ ರೀತಿ

ಬರೆಯಲಾಗಿದೆ ಎಂದರೆ ನಿಜ.

ನಿಡಿ-1 ಪಟೇಲ್ ಚಿಕ್ಕೇಗೌಡನ ಮಕ್ಕಳಾದ ಸಣ್ಣೇಗೌಡ ಮತ್ತು ಚಿಕ್ಕೇಗೌಡನಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಲ್ಲಿರುವ ಸರ್ವೆ ನಂಬರಿಗೂ ದಾವಾ ಸ್ವತ್ತಿನ ಸರ್ವೆ ನಂಬರ್ ಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ಗಳು ನಿಡಿ-1 ರಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ಪಟೇಲ್ ಚಿಕ್ಕೇಗೌಡ ನಮಗೆ ಮತ್ತು ವಾದಿಗಳಿಗೆ ಮುತ್ತಾತ ಎಂದರೆ ಸರಿಯಲ್ಲ. ಪಟೇಲ್ ಚಿಕ್ಕೇಗೌಡ ನಮಗೆ ಮುತ್ತಾತ ಆಗಬೇಕು. ವಾದಿಗಳು ಪಟೇಲ್ ಚಿಕ್ಕೇಗೌಡನ ಕಾನೂನು ಬದ್ಧ ವಾರಸುದಾರರಾಗಿರುವುದಿಲ್ಲ. ವಾದಿಗಳ ತಾತ ಮತ್ತು ಮುತ್ತಾತನ ಹೆಸರು ನನಗೆ ಗೊತ್ತಿಲ್ಲ.

ಪಟೇಲ್ ಚಿಕ್ಕೇಗೌಡನಿಗೆ ನಷ್ಟ ಸಂತತಿ. ಪಟೇಲ್ ಚಿಕ್ಕೇಗೌಡನ ತಂದೆ ಹೆಸರು ಸಣ್ಣೇಗೌಡ. ನಾನು ಸಲ್ಲಿಸಿದ ವಂಶವೃಕ್ಷವನ್ನು ದಾಖಲಾತಿಗಳ ಆಧಾರದ ಮೇಲೆ ತಯಾರಿಸಿರುತ್ತೇವೆ. ನಾನು ಸಲ್ಲಿಸಿದ ವಂಶವೃಕ್ಷದಲ್ಲಿ ಎಲ್ಲಿಯೂ ಪಟೇಲ್ ಚಿಕ್ಕೇಗೌಡ ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಚಿಕ್ಕೇಗೌಡ ಎಂದು ಬರೆಸಿದ್ದೇವೆ ಎಂದು ನುಡಿಯುತ್ತಾರೆ. ವಂಶವೃಕ್ಷದಲ್ಲಿ ವಾದಿಗಳ ಹೆಸರು ಇದೆ. ನಾನು ಸಲ್ಲಿಸಿದ ವಂಶವೃಕ್ಷದ ಪ್ರಕಾರ ವಾದಿಗಳು ಸಣ್ಣೇಗೌಡನ ಕಾನೂನು ಬದ್ಧ ವಾರಸುದಾರರು ಎಂದರೆ ಸಾಕ್ಷಿಯು ವಾದಿಗಳು ಹಾಕಿಸಿದ್ದಾರೆ ಅವರು ಹಾಕಿಸಿದ್ದಂತೆ ನಾವು ಬರೆಸಿರುತ್ತೇವೆ. ಅವರಿಗೂ ನಮಗೂ ಸಂಬಂದವಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಯಾವ ದಾಖಲೆಯಲ್ಲಿ ವಂಶವೃಕ್ಷ ಬರೆಸಿದ್ದಾರೆ ಎಂದರೆ ಸಾಕ್ಷಿ ವಾದಿಗಳು ನ್ಯಾಯಾಲಯಕ್ಕೆ ಹಾಕಿದ್ದರು ಅದರ ಪ್ರತಿಯನ್ನು ನ್ಯಾಯಾಲಯದಿಂದ ಪಡೆದು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ವಾದಿಗಳು ಸಲ್ಲಿಸಿದ ವಂಶವೃಕ್ಷದ ದಾಖಲೆ ಪ್ರತಿ ನನಗೆ ಸಮನ್ಸ್ ಬಂದಾಗ ಬಂದಿರುತ್ತದೆ ವಾದಿಗಳು ವಾದ ಪತ್ರದಲ್ಲಿ ಬರೆದ ವಂಶವೃಕ್ಷದ ಅಂಶಗಳು ತಪ್ಪಾಗಿರುತ್ತವೆ. ವಾದ ಪತ್ರದ ವಂಶವೃಕ್ಷಕ್ಕೂ ನಿಡಿ-8 ರಲ್ಲಿರುವ ವಂಶವೃಕ್ಷವು ಒಂದೇ ರೀತಿ ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಮ್ಮ ವಂಶವೃಕ್ಷ ನಾವು

ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ವಾದಿಗಳ ಹೆಸರನ್ನು ಬಿಟ್ಟು ನಮ್ಮ ವಂಶವೃಕ್ಷವನ್ನು ಪ್ರತ್ಯೇಕವಾಗಿ ನ್ಯಾಯಾಲಯಕ್ಕೆ ಸಲ್ಲಿಸಲು ನಮಗೆ ತೊಂದರೆ ಇರಲಿಲ್ಲ.

**ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ವಾದಿಗಳ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು